**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಹಾಸನ.**

**ಎಸ್ ಸಿ ನಂ.225/2023**

ಪಿಡಬ್ಲ್ಯೂ: 16
ಸಿಡಬ್ಲ್ಯೂ: 28

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರದೀಪ್ ಬಿ ಆರ್ |
| ತಂದೆಯ ಹೆಸರು | : | ರಾಜೇಗೌಡ |
| ವಯಸ್ಸು | : | 47 ವರ್ಷ |
| ವೃತ್ತಿ | : | ವೃತ್ತ ನಿರೀಕ್ಷಕರು, ಕುಶಾಲನಗರ ವೃತ್ತ |
| ವಾಸ | : | ಕುಶಾಲನಗರ |

**ದಿನಾಂಕಃ 24.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿನಾಂಕಃ16.07.2021 ರಿಂದ 11.07.2025 ರವರೆಗೆ ಹೊಳೇನರಸೀಪುರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 20.07.2023 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ನಾನು ಕಚೇರಿಯಲ್ಲಿರುವಾಗ ಹೊಳೇನರಸೀಪುರ ಗ್ರಾಮಾಂತರ ಠಾಣೆಯ ಪಿಎಸ್ಐ ವಿನಯ್ ರವರು ಈ ಪ್ರಕರಣದ ಆರೋಪಿ ಚಂದ್ರಮೌಳಿ ರವರನ್ನು ನನ್ನ ಮುಂದೆ ಹಾಜರುಪಡಿಸಿ ಪ್ರಕರಣದಲ್ಲಿ ದಾಖಲಾಗಿದ್ದ ಪ್ರಥಮ ವರ್ತಮಾನ ವರದಿ ಹಾಗೂ ಒಂದು ವರದಿಯನ್ನು ಹಾಗೂ ಆರೋಪಿ ಚಂದ್ರಮೌಳಿ ರವರ ಹೇಳಿಕೆಯನ್ನು ಹಾಜರುಪಡಿಸಿರುತ್ತಾರೆ. ಪಿಎಸ್ಐ ರವರು ತನ್ನ ಮುಂದೆ ಹಾಜರುಪಡಿಸಿದ ನಿವೇದನೆ ಹಾಗೂ ಹೇಳಿಕೆಗಳು ನಿಪಿ–1 ಹಾಗೂ 2 ಆಗಿರುತ್ತವೆಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ನಂತರ ಆರೋಪಿಯನ್ನು

ದಸ್ತಗಿರಿ ಮಾಡಿ ವಿಚಾರಣೆಗೆ ಒಳಪಡಿಸಿರುತ್ತೇನೆ. ಆರೋಪಿತನನ್ನು ವಿಚಾರಣೆ ಮಾಡಿದ ಕಾಲದಲ್ಲಿ ಆರೋಪಿತ ಆತನ ಸ್ವಇಚ್ಛಾ ಹೇಳಿಕೆ ನೀಡಿರುತ್ತಾನೆ ಸದರಿ ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯ ನಡೆಸಿದಾಗ ತನ್ನ ಬಟ್ಟೆಗಳಿಗೆ ರಕ್ತ ಆಗಿದ್ದ ಬಗ್ಗೆ ಹಾಗೂ ತಾನು ತನ್ನ ಹೆಂಡತಿಗೆ ಕೊಡಲು ಹೋಗಿದ್ದ ಐಡಿ ಕಾರ್ಡು ಹಾಗೂ ಮಾಸ್ಕ್ ತನ್ನ ಬಳಿ ಇರುವ ಬಗ್ಗೆ ಹಾಗೂ ಆತ ತನ್ನನ್ನು ಕರೆದುಕೊಂಡು ಹೋದರೆ ಆತ ಆತನ ಹೆಂಡತಿಯನ್ನು ಕೊಲೆ ಮಾಡಿದ ಜಾಗ, ಆತನ ಹೆಂಡತಿಯ ಮೃತದೇಹ ಹಾಗೂ ಆತ ಆತನ ಹೆಂಡತಿಯನ್ನು ಕೊಲೆ ಮಾಡಲು ಬಳಸಿರುವ ಕಲ್ಲನ್ನು ತೋರಿಸುವುದಾಗಿ ತಿಳಿಸಿರುತ್ತಾನೆ. ಆರೋಪಿತನದು ಎನ್ನಲಾದ ಸ್ವಇಚ್ಛಾ ಹೇಳಿಕೆಯಲ್ಲಿ ಸಂಬಂಧಿಸಿದ ಭಾಗವಾದ "ನಾನು ನನ್ನ ಹೆಂಡತಿಗೆ ಕೊಡಲು ತೆಗೆದುಕೊಂಡು ಹೋಗಿದ್ದ ಐಡಿ ಕಾರ್ಡು ಹಾಗೂ ಮಾಸ್ಕ್ ನನ್ನ ಬಳಿಯಲ್ಲಿಯೇ ಇವೆ, ನನ್ನನ್ನು ಕರೆದುಕೊಂಡು ಹೋದರೆ ನಾನು ನನ್ನ ಹೆಂಡತಿಯನ್ನು ಕೊಲೆ ಮಾಡಿದ ಜಾಗ, ನನ್ನ ಹೆಂಡತಿಯ ಮೃತದೇಹ ಹಾಗೂ ಕೊಲೆ ಮಾಡಲು ಬಳಸಿರುವ ಕಲ್ಲನ್ನು ತೋರಿಸುತ್ತೇನೆ" ಅನ್ನು ನಿಪಿ–37 ಎಂದು ಗುರುತಿಸಲಾಯಿತು. ನಿಪಿ–37 ರಲ್ಲಿ ಸಾಕ್ಷಿದಾರರು ಗುರುತಿಸಿದ ಆರೋಪಿತನದು ಎನ್ನಲಾದ ಎರಡು ಸಹಿಗಳನ್ನು ಕ್ರಮವಾಗಿ ನಿಪಿ–37(ಎ) ಹಾಗೂ (ಬಿ) ಎಂದು ಗುರುತಿಸಲಾಯಿತು ನಿಪಿ–37 ಹೇಳಿಕೆಯನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಎರಡು ಸಹಿಗಳನ್ನು ಕ್ರಮವಾಗಿ ನಿಪಿ–37(ಸಿ) ಹಾಗೂ (ಡಿ) ಎಂದು ಗುರುತಿಸಲಾಯಿತು. ನಂತರ ಪಂಚರಾದ ಚಾಸಾ–7 ಕಾಂತರಾಜಪ್ಪ ಹಾಗೂ ಚಾಸಾ–8 ಪ್ರತಾಪ್ ಕುಮಾರ ರವರನ್ನು ನೋಟೀಸು ನೀಡಿ ಕಚೇರಿಗೆ ಕರೆಸಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಪಂಚರಿಗೆ ಜಾರಿ ಮಾಡಿದ ಪೊಲೀಸ್ ನೋಟೀಸನ್ನು ನಿಪಿ–38 ಎಂದು ಗುರುತಿಸಲಾಯಿತು. ನಿಪಿ–38 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–38(ಎ) ಎಂದು ಗುರುತಿಸಲಾಯಿತು. ನಂತರ ಪಂಚರಿಗೆ ಆರೋಪಿತ ನೀಡಿದ ಸ್ವಇಚ್ಛಾ ಹೇಳಿಕೆಯ ಬಗ್ಗೆ ಮಾಹಿತಿ ನೀಡಲಾಯಿತು ಹಾಗೂ ಆರೋಪಿತ ತಾನು ತನ್ನ ಪತ್ನಿಯನ್ನು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಬಟ್ಟೆಗಳು ಹಾಗೂ ತನ್ನ ಪತ್ನಿಗೆ ನೀಡಲು ಹೋಗಿದ್ದ ಮಾಸ್ಕ್ ಹಾಗೂ ಐಡಿ ಕಾರ್ಡುಗಳನ್ನು ಹಾಜರುಪಡಿಸಿರುತ್ತಾನೆ. ಮೊದಲನೆಯದಾಗಿ ಆರೋಪಿತ ತಾನು ಕೃತ್ಯ ಎಸಗಿದ ಕಾಲದಲ್ಲಿ ಧರಿಸಿದ್ದ ಶರ್ಟನ್ನು ಬಿಚ್ಚಿ ಕೊಟ್ಟಿರುತ್ತಾನೆ ಅದನ್ನು ಪರಿಶೀಲಿಸಿ ನೋಡಲಾಗಿ ಅದು ಮಾಸಲು ಗುಲಾಬಿ ಬಣ್ಣದ ಸಿಮೆಂಟ್ ಬಣ್ಣದ ಗೆರೆ ಉಳ್ಳ ತುಂಬು ತೋಳಿನ ಶರ್ಟು

ಆಗಿರುತ್ತದೆ ಶರ್ಟಿನ ಎಡತೋಳು, ಬಲಭುಜದ ಮುಂಭಾಗದ ಮಧ್ಯದಭಾಗ ಹಾಗೂ ಕೆಳಭಾಗ ರಕ್ತದ ಕಲೆ ಆಗಿರುವುದು ಕಂಡು ಬಂತು. ಸದರಿ ಶರ್ಟನ್ನು ಮುಂದಿನ ಕ್ರಮಕ್ಕಾಗಿ ಬಿಳಿಯ ಬಟ್ಟೆಯ ಚೀಲದಲ್ಲಿ ಪ್ಯಾಕ್ ಮಾಡಿ M ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ನಂತರ ಆರೋಪಿತ ತಾನು ಧರಿಸಿದ್ದ ಬನಿಯನ್ ಬಿಚ್ಚಿ ಹಾಜರುಪಡಿಸಿದ್ದು ಸದರಿ ಬನಿಯನ್ ಪಾಚಿ ಗ್ರೀನ್ ಕಲರಿನ ಸ್ಯಾಂಡೋ ಬನಿಯನ್ ಆಗಿರುವುದು ಕಂಡು ಬಂತು ಅದರ ಮೇಲೆ ಯಾವುದೇ ರಕ್ತದ ಕಲೆಗಳು ಕಂಡು ಬರಲಿಲ್ಲ. ಸದರಿ ಬನಿಯನ್ ಅನ್ನು ಸಹ ಮುಂದಿನ ಕ್ರಮಕ್ಕಾಗಿ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ M ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ನಂತರ ಆರೋಪಿತ ತಾನು ಧರಿಸಿದ್ದ ಪ್ಯಾಂಟನ್ನು ತೆಗೆದು ಹಾಜರುಪಡಿಸಿರುತ್ತಾನೆ. ಆರೋಪಿ ಹಾಜರುಪಡಿಸಿದ ಪ್ಯಾಂಟ್ ನಶೆ ಕಲರಿನ ಪ್ಯಾಂಟ್ ಆಗಿದ್ದು ಸದರಿ ಪ್ಯಾಂಟ್ ನ ಬಲತೋಳು ಹಾಗೂ ಎಡ ತೋಳಿನ ಮಂಡಿಯ ಭಾಗದಲ್ಲಿ ಸಂಪೂರ್ಣ ರಕ್ತದ ಕಲೆ ಆಗಿದ್ದು, ಪ್ಯಾಂಟಿನ ಎಡತೋಳಿನಲ್ಲಿ ನಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಕಂಡು ಬಂದವು. ಸದರಿ ಪ್ಯಾಂಟನ್ನು ಸಹ ಮುಂದಿನ ಕ್ರಮಕ್ಕಾಗಿ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ M ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ನಂತರ ಆರೋಪಿತ ಆತನ ಬಳಿ ಇದ್ದ ಆತನ ಪತ್ನಿ ಅಂಬಿಕಾರವರ ಐಡಿ ಕಾರ್ಡು ಹಾಗೂ ಮಾಸ್ಕನ್ನು ಹಾಜರುಪಡಿಸಿರುತ್ತಾನೆ. ಸದರಿ ವಸ್ತುಗಳನ್ನು ಪರಿಶೀಲಿಸಲಾಗಿ ಜಾಕಿ ಎಂಬ ಬರಹ ಇರುವ ಕಪ್ಪು ಮತ್ತು ಕಡು ನೀಲಿ ಮಿಶ್ರಿತ ಬಟ್ಟೆ ಮಾಸ್ಕ್ ಅಗಿರುತ್ತದೆ ಹಾಗೂ ಅದರ ಮೇಲೆ ಜಾಕಿ ಎಂದು ಬರೆದಿರುತ್ತದೆ. ಅಂಬಿಕಾ ರವರ ಐಡಿ ಕಾರ್ಡ್ ನಲ್ಲಿ ಆಕೆಯ ಫೋಟೋ ಹಾಗೂ ಇತರೆ ಮಾಹಿತಿ ಇರುವುದು ಕಂಡು ಬಂತು. ಐಡಿ ಕಾರ್ಡಿಗೆ ನೀಲಿ ಬಣ್ಣದ ಒಂದೂವರೆ ಅಡಿ ಉದ್ದದ ಜಾಕಿ ಎಂದು ಹೆಸರಿರುವ ಟ್ಯಾಗ್ ಇರುವುದು ಕಂಡು ಬಂತು. ಮೇಲೆ ಕಾಣಿಸಿದ ಸ್ವತ್ತುಗಳನ್ನು ಮುಂದಿನ ತನಿಖೆಗಾಗಿ ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರನ್ನು ಮಧ್ಯಾಹ್ನ 2.30 ರಿಂದ 3.00 ಗಂಟೆಯವರೆಗೆ ಬರೆಯಲಾಯಿತು. ಸಾಕ್ಷಿದಾರರು ಗುರುತಿಸಿದ ಮಹಜರನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದ್ದು, ನಿಪಿ-13 ರಲ್ಲಿ ಸಾಕ್ಷಿದಾರರರು ಗುರುತಿಸಿದ ಅವರ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ನಿಪಿ-13 ರಲ್ಲಿ ಅಮಾನತ್ತುಪಡಿಸಿಕೊಂಡ

ಆರೋಪಿ ಹಾಜರುಪಡಿಸಿದ ಶರ್ಟು ಮುಮಾ–1 ಹಾಗೂ ಬನಿಯನ್ ಮುಮಾ–2, ಪ್ಯಾಂಟ್ ಮುಮಾ–3, ಐಡಿ ಕಾರ್ಡು ಮುಮಾ–4, ಬಟ್ಟೆಯ ಮಾಸ್ಕ್ ಮುಮಾ–5 ಆಗಿರುತ್ತವೆಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ–13 ಮಹಜರ್ ಕಾಲದಲ್ಲಿ ತೆಗೆಯಲಾದ ಫೋಟೋಗಳು ನಿಪಿ–14 ರಿಂದ 19 ಆಗಿರುತ್ತವೆಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ–13 ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ಸ್ವತ್ತಿನ ಪಟ್ಟಿ ಸಂಖ್ಯೆ 90/23 ರಲ್ಲಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ನಿಪಿ–13 ಮಹಜರಿಗೆ ಪಂಚರಾದ ಕಾಂತರಾಜಪ್ಪ, ಪ್ರತಾಪಕುಮಾರ ಹಾಗೂ ಮಹಜರನ್ನು ಬರೆದ ಸಿಪಿಸಿ 39 ಕೆ ವಿ ಮಹದೇವನಾಯಕ ಹಾಗೂ ಆರೋಪಿತನ ಸಹಿಯನ್ನು ಸಹ ಪಡೆಯಲಾಗಿದೆ. ನಿಪಿ–13(ಸಿ) ಆರೋಪಿತನ ಸಹಿ ಆಗಿರುತ್ತದೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ.

3. ನಂತರ ಆರೋಪಿತ ಆತ ನೀಡಿದ ಸ್ವಇಚ್ಛಾ ಹೇಳಿಕೆ ಮೇರೆಗೆ ಆತ ಪಂಚರಾದ ಕಾಂತರಾಜಪ್ಪ, ಪ್ರತಾಪಕುಮಾರ ಹಾಗೂ ತನಿಖಾಧಿಕಾರಿಯಾದ ನನ್ನನ್ನು ಕರೆದುಕೊಂಡು ಹಾಸನ ಮೈಸೂರು ರಸ್ತೆಯ ಎಸ್ ಅಂಕನಹಳ್ಳಿ ಗ್ರಾಮದ ಬಳಿ ಇರುವ ನೀಲಗಿರಿ ಫಾರೆಸ್ಟಿನ ಒಳಗೆ ಕರೆದುಕೊಂಡು ಹೋಗಿರುತ್ತಾನೆ. ನಂತರ ಆರೋಪಿತ ನೀಲಗಿರಿ ಫಾರೆಸ್ಟಿನ ಒಳಗಡೆ ಇರುವ ಒಂದು ಕಾಲುದಾರಿಯಲ್ಲಿ ನಮ್ಮನ್ನು ಕರೆದುಕೊಂಡು ಹೋಗಿ ಸದರಿ ನೀಲಗಿರಿ ಫಾರೆಸ್ಟಿನ ಮಧ್ಯದಲ್ಲಿ ಉತ್ತರ ದಕ್ಷಿಣಕ್ಕೆ ಅಂಗಾತವಾಗಿ ಮಲಗಿದ್ದ ಒಂದು ಹೆಂಗಸಿನ ಶವ ತೋರಿಸಿ ಆ ಶವ ತನ್ನ ಹೆಂಡತಿಯಾದ ಅಂಬಿಕಾರವರ ಶವ ಎಂದು ಗುರುತಿಸಿ ತಾನು ಆಕೆಯನ್ನು ಕೊಲೆ ಮಾಡಿರುವುದಾಗಿ ತಿಳಿಸಿರುತ್ತಾನೆ. ಮೃತ ಅಂಬಿಕಾರವರ ಶವದಿಂದ ಉತ್ತರಕ್ಕೆ ಸುಮಾರು 12 ಅಡಿಗಳಷ್ಟು ದೂರದಲ್ಲಿ ಬಿದ್ದಿದ್ದ ಒಂದು ದಪ್ಪ ಕಲ್ಲನ್ನು ಆರೋಪಿತ ತೋರಿಸಿ ಅದೇ ಕಲ್ಲಿನಿಂದ ತನ್ನ ಹೆಂಡತಿಯನ್ನು ಕೊಲೆ ಮಾಡಿದ್ದು ಎಂದು ಗುರುತಿಸಿರುತ್ತಾನೆ. ನಂತರ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರನ್ನು ಸ್ಥಳಕ್ಕೆ ಬರಮಾಡಿಕೊಂಡು ಕೃತ್ಯ ಸ್ಥಳದಿಂದ ಸಿಗಬಹುದಾದ ಸಾಕ್ಷಾಧಾರಗಳನ್ನು ಸಂಗ್ರಹಿಸಿ ಕೊಡುವಂತೆ ಕೇಳಿರುತ್ತೇನೆ. ಸ್ಥಳದಲ್ಲಿ ಬಿದ್ದಿದ್ದ ಎರಡು ವಾಕ್ ಮೇಟ್ ಕಂಪನಿಯ ಸಿಮೆಂಟ್ ಬಣ್ಣದ ಲೇಡಿಸ್ ಚಪ್ಪಲಿಗಳನ್ನು ತಜ್ಞರು ಸಂಗ್ರಹಿಸಿ ಕೊಟ್ಟಿದ್ದು ಅದರಲ್ಲಿ ಬಲಗಾಲಿನ ಚಪ್ಪಲಿ ಸಂಪೂರ್ಣ ರಕ್ತಮಯ ಆಗಿರುವುದು ಕಂಡು ಬಂತು. ಚಪ್ಪಲಿಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ M ಎಂಬ ಅಕ್ಷರದಿಂದ ಸೀಲು ಮಾಡಿ ನಮ್ಮ ಹಾಗೂ

ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಿರುತ್ತೇನೆ. ನಂತರ ತಜ್ಞರು ಶವದ ಪಕ್ಕ ಬಿದ್ದಿದ್ದ ರಕ್ತದ ಕಲೆ ಆಗಿರುವ ಎರಡು ಕಲ್ಲಿನ ಚೂರುಗಳನ್ನು ಸಂಗ್ರಹಿಸಿಕೊಟ್ಟಿದ್ದು, ಅದರಲ್ಲಿ ಒಂದು ಕಲ್ಲು ಸುಮಾರು ಅರ್ಧ ಅಡಿ ಉದ್ದ ಇದ್ದು, ಇನ್ನೊಂದು ಕಲ್ಲು ಸುಮಾರು 4 ಅಡಿ ಉದ್ದ ಇರುವುದು ಕಂಡು ಬಂತು. ಎರಡೂ ಕಲ್ಲುಗಳಲ್ಲಿ ರಕ್ತದ ಕಲೆ ಇರುವುದು ಕಂಡು ಬಂತು ಸದರಿ ಕಲ್ಲುಗಳನ್ನು ಸಹ ಮುಂದಿನ ತನಿಖೆಗಾಗಿ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ M ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಹಾಗೂ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ನಂತರ ತಜ್ಞರು ಕೃತ್ಯ ಸ್ಥಳದಲ್ಲಿ ರಕ್ತ ಮಿಶ್ರಿತ ಮಣ್ಣು ಹಾಗೂ ಕೃತ್ಯ ಸ್ಥಳದಿಂದ ಸ್ವಲ್ಪ ದೂರದಲ್ಲಿ ಸಾದಾ ಮಣ್ಣನ್ನು ಸಂಗ್ರಹಿಸಿ ಕೊಟ್ಟಿದ್ದು ಅವುಗಳನ್ನು ಪ್ರತ್ಯೇಕವಾಗಿ ಎರಡು ಬಿಳಿಯ ಬಟ್ಟೆಯ ಚೀಲಗಳಲ್ಲಿ ಹಾಕಿ ಬಾಯಿ ಕಟ್ಟಿ M ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಹಾಗೂ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ನಂತರ ತಜ್ಞರು ಶವ ದೊರೆತ ಸ್ಥಳದಿಂದ ಉತ್ತರಕ್ಕೆ ಸುಮಾರು 12 ಅಡಿಗಳಷ್ಟು ದೂರಕ್ಕೆ ಬಿದ್ದಿದ್ದ ಆರೋಪಿತ ತನ್ನ ಹೆಂಡತಿಯನ್ನು ಕೊಲೆ ಮಾಡಲು ಉಪಯೋಗಿಸಿದ ಕಲ್ಲನ್ನು ಸಂಗ್ರಹಿಸಿ ಕೊಟ್ಟಿದ್ದು ಅದನ್ನು ಪರಿಶೀಲಿಸಿ ನೋಡಿಲಾಗಿ ಒಬ್ಬ ಮನುಷ್ಯ ಎತ್ತಬಹುದಾದ ಕಲ್ಲಾಗಿದ್ದು ಕಲ್ಲು ಸಂಪೂರ್ಣ ರಕ್ತಮಯ ಆಗಿರುವುದು ಕಂಡು ಬಂತು. ಸದರಿ ಕಲ್ಲನ್ನು ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಕಟ್ಟಿ M ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಹಾಗೂ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ ಹಾಗೂ ಮೇಲೆ ಕಾಣಿಸಿದ ಮುದ್ದೆಮಾಲುಗಳನ್ನು ಮುಂದಿನ ಕ್ರಮಕ್ಕಾಗಿ ಮಹಜರ್ ತಯಾರಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಅಮಾನತ್ತು ಮಹಜರನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದ್ದು, ನಿಪಿ-20 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-20(ಡಿ) ಎಂದು ಗುರುತಿಸಲಾಯಿತು. ನಿಪಿ-20 ಮಹಜರಿಗೆ ಪಂಚರಾದ ಕಾಂತರಾಜಪ್ಪ, ಪ್ರತಾಪಕುಮಾರ ಹಾಗೂ ಮಹಜರ್ ಬರೆದ ಸಿಬ್ಬಂದಿಯಾದ ಸಿಪಿಸಿ 39 ಮಹದೇವನಾಯಕ ಮತ್ತು ಆರೋಪಿತ ಚಂದ್ರಮೌಳಿ ರವರು ಸಹಿಗಳನ್ನು ಮಾಡಿರುತ್ತಾರೆ. ನಿಪಿ-20 ಮಹಜರಿನಲ್ಲಿರುವ ನಿಪಿ-20(ಸಿ) ಸಹಿ ಆರೋಪಿತನ ಸಹಿ ಆಗಿರುತ್ತದೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ, ನಿಪಿ-20 ಮಹಜರನ್ನು ಮಧ್ಯಾಹ್ನ 3.15 ರಿಂದ 4.15 ಗಂಟೆಯವರೆಗೆ ಬರೆಯಲಾಗಿರುತ್ತದೆ. ನಿಪಿ-20 ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ

ಗುರುತಿಸಬಲ್ಲೆ. ನಿಪಿ–20 ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಂಡ ಒಂದು ಜೊತೆ ವಾಕ್ ಮೇಟ್ ಕಂಪನಿಯ ಲೇಡೀಸ್ ಚಪ್ಪಲಿ ಮುಮಾ–6 ಹಾಗೂ ಎರಡು ಕಲ್ಲಿನ ಚೂರುಗಳು ಮುಮಾ–7, ದೊಡ್ಡ ಸೈಜುಗಲ್ಲು ಮುಮಾ–8 ಎಂದು, ರಕ್ತಮಿಶ್ರಿತ ಮಣ್ಣು ಮುಮಾ–9, ಸಾದಾ ಮಣ್ಣು ಮುಮಾ–10 ಆಗಿರುತ್ತವೆಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ಮುಮಾ–6 ರಿಂದ 10 ಮುದ್ದೆಮಾಲುಗಳು ಇರುವ ಬಟ್ಟೆಯ ಚೀಲದಲ್ಲಿ ಇರುವ ಗುರುತಿನ ಚೀಟಿಯಲ್ಲಿ ತನ್ನ ಹಾಗೂ ಮಹಜರಿನ ಸಾಕ್ಷಿದಾರರ ಸಹಿಗಳು ಇರುವುದನ್ನು ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ–20 ಮಹಜರ್ ತಯಾರಿಸಿದ ಕಾಲದಲ್ಲಿ ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆ ತಯಾರಿಸಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು ನಿಪಿ–39 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ–39(ಎ) ಎಂದು ಗುರುತಿಸಲಾಯಿತು. ಆರೋಪಿತ ಕೃತ್ಯ ನಡೆದ ಸ್ಥಳವನ್ನು ಹಾಗೂ ತನ್ನ ಪತ್ನಿಯ ಶವವನ್ನು ಗುರುತಿಸಿದ ಕಾಲದಲ್ಲಿ ತೆಗೆಯಲಾದ ಫೋಟೋಗಳು ನಿಪಿ–9 ರಿಂದ 12 ಆಗಿರುತ್ತವೆಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ–9 ರಿಂದ 12 ಫೋಟೋಗಳಲ್ಲಿ ಸಾಕ್ಷಿದಾರರು ಆರೋಪಿತನ ಇರುವಿಕೆಯನ್ನು ಹಾಗೂ ತನಿಖಾಧಿಕಾರಿಯಾದ ತಮ್ಮ ಇರುವಿಕೆಯನ್ನು ಸಹ ಗುರುತಿಸಿರುತ್ತಾರೆ.  ನಿಪಿ–20 ಮಹಜರ್ ಕಾಲದಲ್ಲಿ ತೆಗೆಯಲಾದ ಫೋಟೋಗಳು ನಿಪಿ–21 ರಿಂದ 24 ಆಗಿರುತ್ತವೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ–21 ರಿಂದ 24 ಫೋಟೋಗಳಲ್ಲಿ ಸಾಕ್ಷಿದಾರರು ಆರೋಪಿಯ ಇರುವಿಕೆಯ ಮಹಜರಿನ ಪಂಚ ಸಾಕ್ಷಿಗಳ ಇರುವಿಕೆಯನ್ನು ಹಾಗೂ ತನಿಖಾಧಿಕಾರಿಯಾದ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ನಿಪಿ–24 ಫೋಟೋವಿನಲ್ಲಿ ಆರೋಪಿತ ಕೃತ್ಯಕ್ಕೆ ಬಳಸಿದ ಮುಮಾ–8 ದೊಡ್ಡ ಸೈಜುಗಲ್ಲು ಗುರುತಿಸುತ್ತಿರುವುದು ಕಂಡು ಬರುತ್ತಿದೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ.

4. ನಂತರ ಪಂಚರಾದ ಚಾಸಾ–9 ದಾಕ್ಷಾಯಿಣಿ, ಚಾಸಾ–10 ಸುರೇಶ, ಚಾಸಾ–11 ನೀಲಕಂಠಸ್ವಾಮಿ ರವರ ಸಮಕ್ಷಮ ಮೃತ ಅಂಬಿಕಾರವರ ಶವದ ಮೇಲೆ ಘಟನಾ ಸ್ಥಳದಲ್ಲಿಯೇ ಶವತನಿಖಾ ವರದಿಯನ್ನು ಸಂಜೆ 4.15 ರಿಂದ 5.45 ಗಂಟೆಯ ಅವಧಿಯಲ್ಲಿ ತಯಾರಿಸಿರುತ್ತೇನೆ ಮೃತ ಅಂಬಿಕಾ ರವರ ಶವವನ್ನು ಪರಿಶೀಲಿಸಲಾಗಿ ಆಕೆಯ ಮೃತಳ ಹಣೆಯ ಮಧ್ಯಭಾಗದಲ್ಲಿ 4 X 6 ಸೆಂ ಮೀ ವಿಸ್ತಾರದ ಜಜ್ಜಿದ

ಗಾಯ ಇರುವುದು ಕಂಡು ಬಂತು ಮೃತಳ ಎರಡೂ ಕಣ್ಣು, ಮೂಗು, ಬಾಯಿ ಹಾಗೂ ಕಿವಿಗಳಲ್ಲಿ ರಕ್ತ ಹೊರಬಂದಿರುವ ನಿಶಾನೆ ಕಂಡು ಬಂತು. ಮೃತಳ ಬಾಯಿ ತೆರೆದು ಹಲ್ಲು ಮುರಿದಿರುವ ರೀತಿ ಕಂಡು ಬಂತು. ಸಾಕ್ಷಿದಾರರು ಗುರುತಿಸಿದ ಮೃತಳ ಶವಪರೀಕ್ಷಾ ವರದಿಯನ್ನು ಈಗಾಗಲೇ ನಿಪಿ–25 ಎಂದು ಗುರುತಿಸಲಾಗಿದ್ದು, ನಿಪಿ–25 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಗಳನ್ನು ಕ್ರಮವಾಗಿ ನಿಪಿ–25(ಸಿ) ಹಾಗೂ (ಡಿ) ಎಂದು ಗುರುತಿಸಲಾಯಿತು. ಮೃತಳ ಶವ ತನಿಖಾ ವರದಿ ಕಾಲದಲ್ಲಿ ಸಾಕ್ಷಿದಾರರಾದ ಚಾಸಾ–12 ಕಾವೇರಮ್ಮ ಹಾಗೂ ಚಾಸಾ–13 ಅವಿನಾಶ್ ರವರ ಹೇಳಿಕೆಗಳನ್ನು ಸಹ ಪಡೆದುಕೊಂಡಿರುತ್ತೇನೆ. ನಂತರ ಮೃತಳ ಶವಪರೀಕ್ಷೆಗಾಗಿ ಆಕೆಯ ದೇಹವನ್ನು ಸಿಬ್ಬಂದಿಯೊಂದಿಗೆ ಹಾಸನದ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಕಳುಹಿಸಲಾಗಿರುತ್ತದೆ. ನಂತರ ಆರೋಪಿಯನ್ನು ಹಾಗೂ ನಿಪಿ–20 ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನನ್ನ ಕಚೇರಿಗೆ ತಂದಿರುತ್ತೇನೆ ಹಾಗೂ ನಿಪಿ–20 ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ಮಾಲುಪಟ್ಟಿ ಸಂಖ್ಯೆ 91/23 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಆರೋಪಿತನು ತನಿಖೆಗೆ ಅವಶ್ಯಕತೆ ಇಲ್ಲದ ಕಾರಣ ರಿಮ್ಯಾಂಡ್ ಅರ್ಜಿಯೊಂದಿಗೆ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

5. ಮೃತ ಅಂಬಿಕಾರವರ ಶವಪರೀಕ್ಷೆ ಆದ ನಂತರ ಶವದ ಬೆಂಗಾವಲು ಕರ್ತವ್ಯದಲ್ಲಿದ್ದ ಚಾಸಾ–25 ಮಹಿಳಾ ಪಿಸಿ ಶೃತಿ ರವರು ಮೃತಳ ಶವವನ್ನು ಅವರ ಪೋಷಕರಿಗೆ ಹಸ್ತಾಂತರಿಸಿರುತ್ತಾರೆ. ಅದೇ ದಿನ ಚಾಸಾ–25 ಮಹಿಳಾ ಪಿಸಿ ಶೃತಿ ರವರು ಮೃತಳ ಶವಪರೀಕ್ಷಾ ಕಾಲದಲ್ಲಿ ವೈದರು ಸಂಗ್ರಹಿಸಿ ಕೊಟ್ಟಿದ್ದ ಮೃತಳ ದೇಹದ ವಿಸೆರಾವನ್ನು ಹಾಗೂ ಮೃತಳ ದೇಹದ ಮೇಲಿದ್ದ ಸ್ವೆಟರ್, ಕಪ್ಪು ಬಣ್ಣದ ವೇಲ್, ಟಾಪ್, ಲೆಗಿನ್ ಹಾಗೂ ಸ್ಲಿಪ್ ಅನ್ನು ಹಾಜರುಪಡಿಸಿದ್ದು ಅದನ್ನು ಪಡೆದುಕೊಂಡು ಮಾಲುಪಟ್ಟಿ ಸಂಖ್ಯೆ 95/2023 ರಲ್ಲಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಮೃತಳ ಮೈಮೇಲಿದ್ದ ಬಟ್ಟೆಗಳು ಮುಮಾ–11 ರಿಂದ 15 ಆಗಿರುತ್ತವೆಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ದಿ:22.07.2023 ರಂದು ಮೃತಳ ತಂಗಿ ಚಾಸಾ–3 ರಾಜೇಶ್ವರಿ ರವರ ಹೇಳಿಕೆಯನ್ನು ಸಹ ಪಡೆದಿರುತ್ತೇನೆ. ಚಾಸಾ–3 ರವರು ಅವರ ಹೇಳಿಕೆ ನೀಡಿದ ಕಾಲದಲ್ಲಿ ಆರೋಪಿ ಚಿನ್ನ ಅಡವಿಟ್ಟಿದ್ದ ಎರಡು ರಶೀದಿಗಳು, ಆರೋಪಿತ ಬರೆದುಕೊಟ್ಟಿದ್ದ ಮುಚ್ಚಳಿಕೆ ಪತ್ರ, ಆರೋಪಿತನ ಹೆಸರಿನಲ್ಲಿ

ವಾಹನ ಖರೀದಿಸಿದ್ದ ಬಗ್ಗೆ ಆರ್ ಸಿ ಪುಸ್ತಕದ ಪ್ರತಿ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ರಾಜೇಶ್ವರಿ ರವರು ಹಾಜರುಪಡಿಸಿದ ರಶೀದಿಗಳು, ಮುಚ್ಚಳಿಕೆ ಪತ್ರ ಹಾಗೂ ಆರ್ ಸಿ ಪ್ರತಿಗಳು ನಿಪಿ-5 ರಿಂದ 8 ಆಗಿರುತ್ತವೆಂದು ಸಾಕ್ಷಿದಾರರು ಗುರುತಿಸಿರುತ್ತಾರೆ.

6. ದಿಃ25.07.2023 ರಂದು ಮೃತ ಅಂಬಿಕಾರ ರವರ ಶವಪರೀಕ್ಷಾ ವರದಿಯನ್ನು ಹಾಸನದ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ನಿಪಿ-29 ಶವಪರೀಕ್ಷಾ ವರದಿ ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-29(ಡಿ) ಎಂದು ಗುರುತಿಸಲಾಯಿತು. ದಿಃ26.07.2023 ರಂದು ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿತ ಹಾಗೂ ಆತನ ಪತ್ನಿ ಅಂಬಿಕಾ ರವರು ಘಟನಾ ಪೂರ್ವದಲ್ಲಿ ಬಸ್ಸಿನಲ್ಲಿ ಪ್ರಯಾಣಿಸಿದ ಬಗ್ಗೆ ಪ್ರತ್ಯಕ್ಷ ಸಾಕ್ಷಿ ಆಗಿದ್ದ ಚಾಸಾ-4 ಪುನೀತ್ ರವರ ಹೇಳಿಕೆ ಪಡೆದಿರುತ್ತೇನೆ. ದಿಃ27.07.2023 ರಂದು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿದ್ದ ಮುದ್ದೆಮಾಲುಗಳನ್ನು ಠಾಣಾ ಸಿಬ್ಬಂದಿ ಚಾಸಾ-26 ಧರಣೇಶ್ ರವರ ಮೂಲಕ ಎಫ್ ಎಸ್ ಎಲ್ ಗೆ ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ. ದಿಃ28.07.2023 ರಂದು ಚಾಸಾ-5 ಚಂದ್ರಶೇಖರ ಹಾಗೂ ಚಾಸಾ-6 ರಾಮಚಂದ್ರರವರ ಹೇಳಿಕೆಗಳನ್ನು ಸಹ ಪಡೆದಿರುತ್ತೇನೆ. ದಿಃ01.09.2023 ರಂದು ಆರ್ ಎಫ್ ಎಸ್ ಎಲ್ ನಿಂದ ರಾಸಾಯನಿಕ ಪರೀಕ್ಷಾ ವರದಿಗಳನ್ನು ಪಡೆದುಕೊಂಡಿರುತ್ತೇನೆ. ನಿಪಿ-27 ಒಂದು ರಾಸಾಯನಿಕ ಪರೀಕ್ಷಾ ವರದಿಯಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು. ದಿಃ09.09.2023 ರಂದು ಎಫ್ ಎಸ್ ಎಲ್ ವರದಿಯ ಆಧಾರದ ಮೇಲೆ ಮೃತಳ ಸಾವಿಗೆ ಸಂಬಂಧಿಸಿದಂತೆ ಮೃತಳ ಶವಪರೀಕ್ಷೆ ಮಾಡಿದ ವೈದ್ಯರಿಂದ ಮೃತಳ ಸಾವಿಗೆ ಸಂಬಂಧಿಸಿದಂತೆ ಅಂತಿಮ ಅಭಿಪ್ರಾಯದ ವರದಿಯನ್ನು ಪಡೆದುಕೊಂಡಿರುತ್ತೇನೆ. ನಿಪಿ-29 ಶವಪರೀಕ್ಷಾ ವರದಿಯಲ್ಲಿ ಸಾಕ್ಷಿದಾರರು ವೈದ್ಯರ ಅಂತಿಮ ಅಭಿಪ್ರಾಯದ ವರದಿಯನ್ನು ಗುರುತಿಸಿರುತ್ತಾರೆ. ವೈದ್ಯರ ಅಭಿಪ್ರಾಯದ ವರದಿಯನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-29(ಇ) ಎಂದು ಗುರುತಿಸಲಾಯಿತು.

7. ದಿಃ12.09.2023 ರಂದು ಮೃತಳು ತನ್ನ ಗಂಡನ ವಿರುದ್ದ ಹಳ್ಳಿ ಮೈಸೂರು ಪೊಲೀಸ್ ಠಾಣೆಯಲ್ಲಿ ನೀಡಿದ್ದ ದೂರಿಗೆ ಸಂಬಂಧಿಸಿದಂತೆ ದೂರಿನ ಪ್ರತಿಯನ್ನು ಹಾಗೂ ಸದರಿ ದೂರಿಗೆ ಸಂಬಂಧಿಸಿದಂತೆ ಆರೋಪಿತ ನೀಡಿದ ಹೇಳಿಕೆ ಹಾಗೂ ಪೊಲೀಸರು ನೀಡಿದ ಹಿಂಬರಹವನ್ನು ಪಡೆದುಕೊಂಡಿರುತ್ತೇನೆ. ನಿಪಿ–34 ಅಂಬಿಕಾ ರವರ ದೂರಿನ ಪ್ರತಿಯನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–34(ಸಿ) ಎಂದು, ನಿಪಿ–35 ಆರೋಪಿತನ ಹೇಳಿಕೆಯ ಪ್ರತಿಯನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರ ಸಹಿಯನ್ನು ನಿಪಿ–35(ಸಿ) ಎಂದು ಹಾಗೂ ಪೊಲೀಸರ ಹಿಂಬರಹ ನಿಪಿ–36ರ ಪ್ರತಿಯನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರ ಸಹಿಯನ್ನು ನಿಪಿ–36(ಬಿ) ಎಂದು ಗುರುತಿಸಲಾಯಿತು. ಅದೇ ದಿನ ವಲಯ ಅರಣ್ಯಾಧಿಕಾರಿಗಳು, ಪ್ರಾದೇಶಿಕ ವಲಯ ಅರಣ್ಯ, ಹೊಳೇನರಸೀಪುರ ರವರು ಹಾಜರುಪಡಿಸಿದ ಕೃತ್ಯ ನಡೆದ ಸ್ಥಳಕ್ಕೆ ಸಂಬಂಧಿಸಿದ ದಾಖಲಾತಿಯನ್ನು ಸಹ ಪಡೆದುಕೊಂಡಿರುತ್ತೇನೆ. ನಿಪಿ–32 ಪತ್ರವನ್ನು ದಾಖಲೆಗಳೊಂದಿಗೆ ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–32(ಎ) ಹಾಗೂ (ಬಿ) ಎಂದು ಗುರುತಿಸಲಾಯಿತು.

8. ದಿಃ19.09.2023 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತನ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ದಿನಾಂಕಃ05.10.2023 ರಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹೊಳೇನರಸೀಪುರ ರವರಿಂದ ಕೃತ ನಡೆದ ಸ್ಥಳದ ನಕಾಶೆಯನ್ನು ನಿಪಿ–33 ರಂತೆ ಪಡೆದುಕೊಂಡಿರುತ್ತೇನೆ. ನಿಪಿ–33ನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–33(ಎ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿತ ಕೃತ್ಯಕ್ಕೆ ಬಳಸಿದ ಮುಮಾ–8 ದೊಡ್ಡ ಕಲ್ಲನ್ನು ಮೃತಳ ಶವಪರೀಕ್ಷೆ ಮಾಡಿದ ವೈದ್ಯರಿಗೆ ಕಳುಹಿಸಿ ಸದರಿ ಕಲ್ಲನ್ನು ಪರೀಕ್ಷಿಸಿ ಅಭಿಪ್ರಾಯ ನೀಡುವಂತೆ ಪತ್ರ ಬರೆದಿರುತ್ತೇನೆ ಮುಮಾ–8 ದೊಡ್ಡ ಕಲ್ಲನ್ನು ಪರೀಕ್ಷಿಸಿದ ವೈದ್ಯರು ಮುಮಾ–8 ಕಲ್ಲಿನಿಂದ ಹಲ್ಲೆ ನಡೆಸಿದಾಗ ಮೃತಳ ದೇಹದ ಮೇಲೆ ಕಂಡು ಬಂದಂತಹ 1ನೇ ಕ್ರಮಾಂಕದ ಗಾಯ ಸಂಭವಿಸುವ ಬಗ್ಗೆ ಹಾಗೂ ಸದರಿ ಗಾಯದಿಂದ ಗಾಯಾಳುವಿನ ಸಾವು ಸಂಭವಿಸಬಹುದಾದ ಬಗ್ಗೆ ಅವರ ಅಭಿಪ್ರಾಯದ ವರದಿ ನೀಡಿರುತ್ತಾರೆ. ನಿಪಿ–30 ವೈದ್ಯರ ಅಭಿಪ್ರಾಯದ ವರದಿಯನ್ನು ಪಡೆದುಕೊಂಡ

ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–30(ಬಿ) ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ಹಾಜರುಪಡಿಸಲಾಗಿರುವ ಫೋಟೋಗಳನ್ನು ಠಾಣೆಯ ಕ್ಯಾಮರಾದಲ್ಲಿ ತೆಗೆಸಿರುವ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ಅಡಿಯಲ್ಲಿ ನನ್ನ ದೃಢೀಕರಣ ಪತ್ರ ನೀಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ದೃಢೀಕರಣ ಪತ್ರವನ್ನು ನಿಪಿ–40 ಎಂದು, ನಿಪಿ–40 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–40(ಎ) ಎಂದು ಗುರುತಿಸಲಾಯಿತು. ಅದೇ ದಿನ ಮೃತೆ ಅಂಬಿಕಾ ರವರು ಪೇಜ್ ಇಂಡಸ್ಟ್ರೀಸ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬಗ್ಗೆ ದೃಢೀಕರಣ ಪತ್ರವನ್ನು ನಿಪಿ–31 ರಂತೆ ಪಡೆದುಕೊಂಡಿರುತ್ತೇನೆ. ನಿಪಿ–31 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–31(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಆರೋಪಿಯನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

9. ದಿಃ20.07.2023 ರಂದು ಆರೋಪಿಯನ್ನು ನನ್ನ ಮುಂದೆ ಹಾಜರುಪಡಿಸಿದ ಕಾಲದಲ್ಲಿ ನಾನಾಗಲೀ ನನ್ನ ಸಿಬ್ಬಂದಿಯಾಗಲೀ ಕೂಡಲೇ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿಲ್ಲ. ನಿಪಿ–2 ಆರೋಪಿತನ ಹೇಳಿಕೆಯಲ್ಲಿ ಅದನ್ನು ಎಷ್ಟು ಗಂಟೆ ಸಮಯಕ್ಕೆ ಪಡೆಯಲಾಗಿದೆ ಎಂದು ಕಾಣಿಸಿಲ್ಲ ಎಂದರೆ ಸರಿ. ಆರೋಪಿಯನ್ನು ನನ್ನ ಮುಂದೆ ಹಾಜರುಪಡಿಸಿದ ಕೂಡಲೇ ಘಟನೆ ನಡೆದ ಸ್ಥಳವನ್ನು ನಾವು ಸಂರಕ್ಷಣೆ ಮಾಡಿಲ್ಲ. ಆರೋಪಿತ ನನ್ನ ಮುಂದೆ ನಿಪಿ–37 ರಂತೆ ಯಾವುದೇ ಸ್ವಇಚ್ಛಾ ಹೇಳಿಕೆ ನೀಡದಿದ್ದರೂ ಸಹ ಪ್ರಶ್ನಿತ ಸ್ವಇಚ್ಛಾ ಹೇಳಿಕೆಯನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ–13 ಮಹಜರಿನಲ್ಲಿ ಮಹಜರ್ ಬರೆದ ಸಮಯವನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ–13ರ ಪಂಚರು ಸ್ಥಳೀಯ ವ್ಯಕ್ತಿಗಳು ಅಲ್ಲ ಎಂದರೆ ಸರಿ. ಪಂಚ ಸಾಕ್ಷಿಗಳು ಸರ್ಕಾರಿ ನೌಕರರಾಗಿರುತ್ತಾರೆ. ನಾನು ತಿಳಿಸಿರುವಂತೆ ನಿಪಿ–13 ಮಹಜರ್ ತಯಾರಿಸಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಳ್ಳದಿದ್ದರೂ ಸಹ ಪ್ರಶ್ನಿತ ಮಹಜರನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ–20 ಮಹಜರ್ ಕಾಲದಲ್ಲಿ ಬೆರಳಚ್ಚು ತಜ್ಞರನ್ನು ಕರೆದುಕೊಂಡು ಹೋಗಿರಲಿಲ್ಲ. ನಿಪಿ–20 ಮಹಜರಿನಲ್ಲಿ ಅಮಾನತ್ತುಪಡಿಸಿಕೊಂಡ ಮುಮಾ–7 ಹಾಗೂ

8 ಯಾವ ಬಣ್ಣದ ಕಲ್ಲುಗಳು ಎಂದು ನಾನು ಮಹಜರಿನಲ್ಲಿ ತಿಳಿಸಿಲ್ಲ. ನಿಪಿ–20 ಮಹಜರ್ ಕಾಲದಲ್ಲಿ ಸ್ಥಳೀಯ ವ್ಯಕ್ತಿಗಳನ್ನು ವಿಚಾರಣೆ ಮಾಡಿಲ್ಲ. ನಿಪಿ–20 ಮಹಜರ್ ಕಾಲದಲ್ಲಿ ಆರೋಪಿತನಿಗೆ ಸಂಬಂಧಿಸಿದ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಾನು ಸ್ಥಳದಲ್ಲಿ ನಿಪಿ–20 ರಂತೆ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನಿಪಿ–20 ಮಹಜರಿಗೆ ಸ್ಥಳೀಯ ಸಾಕ್ಷಿದಾರರು ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ–20 ಮಹಜರಿಗೆ ಸಾಕ್ಷಿದಾರರ ಸಹಿಗಳನ್ನು ಠಾಣೆಯಲ್ಲಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ–14 ರಿಂದ 19 ಫೋಟೋಗಳ ಮೇಲೆ ಅವುಗಳನ್ನು ಯಾವ ದಿನಾಂಕದಂದು ಯಾವ ಕ್ಯಾಮರಾದಿಂದ ತೆಗೆಯಲಾಗಿದೆ ಎಂದು ಕಂಡು ಬರುವುದಿಲ್ಲ ಎಂದರೆ ಸರಿ. ನಿಪಿ–20 ಮಹಜರ್ ಕಾಲದಲ್ಲಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ–20 ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ ಎನ್ನಲಾದ ವಸ್ತುಗಳ ಮೇಲೆ ಸಾಕ್ಷಿದಾರರ ಸಹಿಗಳನ್ನು ಠಾಣೆಯಲ್ಲಿ ಪಡೆದು ಅಂಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ತನಿಖಾ ಕಾಲದಲ್ಲಿ ಚಾಸಾ–9 ರಿಂದ 11 ರವರ ಯಾವುದೇ ಹೇಳಿಕೆಗಳನ್ನು ಪಡೆಯದಿದ್ದರೂ ಪ್ರಶ್ನಿತ ಹೇಳಿಕೆಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ನಿಪಿ–25 ರಂತೆ ಯಾವುದೇ ಶವತನಿಖಾ ವರದಿಯನ್ನು ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಿಪಿ–25 ಶವತನಿಖಾ ವರದಿಯನ್ನು ಠಾಣೆಯಲ್ಲಿ ತಯಾರಿಸಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆಯಲಾಗಿದೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಪೂರಕವಾಗಿ ನಿಪಿ–29 ಶವಪರೀಕ್ಷಾ ವರದಿಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮನೆಯಿಂದ ಆರೋಪಿಯನ್ನು ಕರೆತಂದು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ಮೃತಳ ದೇಹದ ವಿಸೆರಾವನ್ನು ಹಾಗೂ ಮೃತಳ ಮೈಮೇಲಿದ್ದ ಬಟ್ಟೆಗಳನ್ನು ಪಡೆದುಕೊಂಡ ಕಾಲದಲ್ಲಿ ಯಾವುದೇ ಮಹಜರನ್ನು ತಯಾರಿಸಿಲ್ಲ. ನಾನು ಮೃತಳ ದೇಹದ ವಿಸೆರವನ್ನಾಗಲೀ ಅಥವಾ ಮೃತಳ ಮೈಮೇಲಿದ್ದ ಬಟ್ಟೆಗಳನ್ನಾಗಲೀ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ–3 ರಾಜೇಶ್ವರಿ ರವರ ಹೇಳಿಕೆ ಹಾಗೂ ಆರೋಪಿತನ ಹೇಳಿಕೆಗಳ ನಡುವೆ ವ್ಯತ್ಯಾಸ ಇರುತ್ತದೆ ಎಂದರೆ ಸ್ವಲ್ಪ ವ್ಯತ್ಯಾಸ ಇರುತ್ತದೆ. ನಿಪಿ–34 ದೂರಿನಲ್ಲಿ ಅಂಬಿಕಾ ರವರು ಆಕೆಯ ಗಂಡನಿಂದ ಆಕೆಗೆ ಕಿರುಕುಳ ಆಗುತ್ತಿದೆ ಎನ್ನುವ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನಿಪಿ–34 ದೂರಿನಲ್ಲಿ ಅಂಬಿಕಾ ರವರು ಆಕೆಯ ಗಂಡನಾದ ಆರೋಪಿ ಮಧ್ಯಪಾನ

ಮಾಡಿ ಆಕೆಯ ಟಿ ಟಿ ವಾಹನದಲ್ಲಿ ಅಂಬಿಕಾ ಬರುತ್ತಿಲ್ಲ ಎಂದು ಗಲಾಟೆ ಮಾಡುತ್ತಾನೆ ಎನ್ನುವ ಬಗ್ಗೆ ಕಾಣಿಸಲಾಗಿದೆ ಎಂದರೆ ಸರಿ. ನಿಪಿ–5 ಹಾಗೂ 6 ರಶೀದಿಗಳು ಆರೋಪಿತನ ಹೆಸರಿನಲ್ಲಿರುತ್ತವೆಂದರೆ ಸರಿ. ನಿಪಿ–8 ಆರ್ ಸಿ ಪುಸ್ತಕ ಸಹ ಆರೋಪಿತನ ಹೆಸರಿನಲ್ಲಿರುತ್ತದೆ ಎಂದರೆ ಸರಿ. ನಿಪಿ–5 ಹಾಗೂ 6 ರಲ್ಲಿ ಕಾಣಿಸಿರುವ ವಡವೆಗಳು ಆರೋಪಿತನಿಗೆ ಸೇರಿದ ವಡವೆಗಳು ಎಂದರೆ ಸರಿಯಲ್ಲ. ವಡವೆಗಳು ಹಾಗೂ ವಾಹನ ಆರೋಪಿತನಿಗೆ ಸೇರಿದವು ಆಗಿದ್ದ ಕಾರಣ ನಿಪಿ–5, 6 ಹಾಗೂ 8 ದಾಖಲೆಗಳು ಆರೋಪಿತನ ಹೆಸರಿನಲ್ಲಿರುತ್ತವೆಂದರೆ ಸರಿಯಲ್ಲ. ಚಾಸಾ–4 ರವರು ಯಾವುದೇ ಹೇಳಿಕೆಯನ್ನು ನನ್ನ ಮುಂದೆ ನೀಡದಿದ್ದರೂ ಸಹ ಅವುಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಯಾವುದೇ ವಿಸೆರಾವನ್ನು ಸಿಬ್ಬಂದಿಯ ಮೂಲಕ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಚಾಸಾ–5 ಹಾಗೂ 6 ರವರು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕಾಗಿ ಸುಳ್ಳು ಆರ್ ಎಫ್ ಎಸ್ ಎಲ್ ವರದಿಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ವೈದ್ಯರಿಂದ ಅಂತಿಮ ವರದಿಯನ್ನು ಸಹ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಯಾವ ದಿನಾಂಕದಂದು, ಯಾವ ಕ್ಯಾಮರಾದಿಂದ ಫೋಟೋಗಳನ್ನು ತೆಗೆಯಲಾಗಿದೆ ಎಂದು ನಿಪಿ–40 ದೃಢೀಕರಣ ಪತ್ರದಲ್ಲಿ ತಿಳಿಸಲಾಗಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ತನಿಖಾ ಕಾಲದಲ್ಲಿ ತೆಗೆಯಲಾದ ಫೋಟೋಗಳಿಗೆ ಸಂಬಂಧಿಸಿದ ಮೊಬೈಲ್ ಸರ್ಕಾರದಿಂದ ನಮಗೆ ನೀಡಲಾದ ಮೊಬೈಲ್ ಆಗಿರುತ್ತದೆ. ನಿಪಿ–32 ಪತ್ರದ ಜೊತೆ ಕಾಣಿಸಿರುವಂತಹ ಯಾವುದೇ ದಾಖಲೆಯನ್ನು ಯಾವುದೇ ವಲಯ ಅರಣಾಧಿಕಾರಿಯವರಿಂದ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕಾಗಿ ಸುಳ್ಳು ಕೃತ್ಯ ಸ್ಥಳದ ನಕಾಶೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಪೂರಕವಾಗಿ ವೈದ್ಯರ ಕಲ್ಲು ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

10. ಆರೋಪಿತ ತಾನೇ ಠಾಣೆಗೆ ಬಂದು ಶರಣಾಗತನಾಗಿರುತ್ತಾನೆ ಎನ್ನುವ ಬಗ್ಗೆ ವೀಡಿಯೋ ಅಥವಾ ಫೋಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಮ್ಮ ಠಾಣೆಯಲ್ಲಿ ಸಿಸಿ ಕ್ಯಾಮರಾ ಇರುತ್ತದೆ. ಆರೋಪಿತ ಠಾಣೆಗೆ ಬಂದು ಶರಣಾಗತನಾಗಿದ್ದಾನೆ ಎನ್ನುವ ಬಗ್ಗೆ ಠಾಣೆಯ ಸಿಸಿ ಟಿವಿ ಕ್ಯಾಮರಾದ ಫೂಟೇಜನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆರೋಪಿತನ ಹೇಳಿಕೆಯನ್ನು ಪ್ರಕರಣಕ್ಕಾಗಿ

ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪ್ರಕರಣದ ತನಿಖಾ ಕಾಲದಲ್ಲಿ ಆರೋಪಿತ ಕೃತ್ಯ ಎಸಗಿರುವ ಬಗ್ಗೆ ಯಾವುದೇ ಸಾಕ್ಷಾಧಾರಗಳು ಲಭ್ಯ ಇಲ್ಲದಿದ್ದ ಕಾರಣ ಪ್ರಕರಣದ ತನಿಖಾ ಕಾಲದಲ್ಲಿ ವಿಚಾರಣೆಗೆ ಆರೋಪಿಯನ್ನು ಠಾಣೆಗೆ ಕರೆತಂದು ಆತನ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಹಾಜರುಪಡಿಸಿರುವ ಮುದ್ದೆಮಾಲುಗಳನ್ನು ನಾವು ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ಆರೋಪಿತನಿಂದ ಯಾವುದೇ ಕೃತ್ಯ ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್

ನ್ಯಾಯಾಧೀಶರು, ಹಾಸನ.